ಬಿಟ್ಟುಕೊಂಡು ಮತ್ತೊಮ್ಮೆ ಕೇಳಿಸಿಕೊಳ್ಳಲೇ? ಸಂದೇಹಗಳು ಕಾಡುತ್ತಿದ್ದವು. ಅಷ್ಟಕ್ಕೂ ಅವಳೇನೂ ಕುರೂಪಿಯಲ್ಲ. ಕೈ, ಕಾಲು, ಮುಖ ಎಲ್ಲಾ ನೆಟ್ಟಗೇ ಇವೆ. ಮತ್ತೆ ಹೇಗೆ ಒಪ್ಪಿದಳು? ನನಗೇ ಗೊತ್ತಿಲ್ಲದಂತೆ ನಾನೇನಾದರೂ ಸುಂದರನಾಗಿಬಿಟ್ಟೆನೇ? ಕನ್ನಡಿಯ ಮುಂದೆ ನಿಂತು ನೋಡಿಕೊಂಡೆ. ಅಥವಾ ಹುಡುಗಿಗೇನಾದರೂ ಮಾರಕ ರೋಗವಿರಬಹುದೇ? ಹುಣ್ಣಿಮೆಯ ರಾತ್ರಿಗಳಲ್ಲಿ ಹುಚ್ಚು ಕೆದರುವುದು, ನಿದ್ರೆಗಣ್ಣಿನಲ್ಲಿ ಎದ್ದು ಕುಣಿಯುವುದು, ಮೈಮೇಲೆ ದಯ್ಯ ಬರುವುದು ಮುಂತಾದ ವಿಚಿತ್ರ ಕಾಯಿಲೆಗಳಿರಬಹುದೇ? ನೋಡಿದಾಗ ಹಾಗನಿಸಲಿಲ್ಲ. ಲಕ್ಷಣವಾಗಿಯೇ ಇದ್ದಾಳೆ. ಚೆನ್ನಾಗಿಯೇ ಮಾತಾಡಿದಳು. ಎರಡು ಪ್ಲಸ್ ಎರಡು ಎಷ್ಟು ಎಂದು ಕೇಳಿದರೆ ನಾಲ್ಕು ಎಂದು ಹೇಳುವಂತೆಯೇ ಕಾಣುತ್ತಿದ್ದಳು. ಆದರೂ...

'ನೋ ಸಾತ್ವಿಕ್ ನೋ. ನಿನ್ನನ್ನು ನೀನು ಇಷ್ಟೆಲ್ಲಾ ಕೀಳಾಗಿ ಎಣಿಸಬೇಡ. ನೋಡೋಕೆ ಸ್ವಲ್ಪ ಇಲಿನ ಥರಾ ಕಂಡರೂ ನೀನೂ ಬುದ್ಧಿವಂತನೇ. ಅದು ಅವಳಿಗೂ ಅರ್ಥವಾಗಿದೆ. ಅದಕ್ಕೇ ನಿನ್ನನ್ನವಳು ಒಪ್ಪಿದ್ದಾಳೆ.' ಹಾಗಂತ ನನಗೆ ನಾನೇ ಹೇಳಿಕೊಂಡೆ. ಇನ್ನು ಮುಂದೆ ಯೂಟ್ಯೂಬ್‌ನಲ್ಲಿ ಯಾವುದಾದರೂ ಬಾಬಾರ ಸ್ಫೂರ್ತಿದಾಯಕ ಮಾತುಗಳನ್ನು ಕೇಳಿ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕೆಂದು ಮನಸ್ಸಿನಲ್ಲೇ ನಿರ್ಧರಿಸಿಕೊಂಡೆ.

★★★

"ಇವತ್ತು ಭೇಟಿಯಾಗಬಹುದಾ?"

ಮಳೆಯಲ್ಲಿ ಮಿಂದ ತಂತಿಯೊಂದು ಮೀಟಿದಷ್ಟೇ ಹಿತವಾಗಿ ಅತ್ತಲಿಂದ ತೇಲಿಬಂತು ವೈಶಾಲಿಯ ಸ್ವರ. ವೈಶಾಲಿ! ನಾನು ಮದುವೆಯಾಗಲಿರುವ ಹುಡುಗಿ! 'ಒಪ್ಪಿಗೆ' ತಿಳಿಸಿದ, ಕಳೆದ ಹತ್ತು ದಿನದ ಅಷ್ಟೂ ನಿಮಿಷಗಳಲ್ಲೂ ನನ್ನ ಮನಸ್ಸನ್ನು ಆವರಿಸಿಕೊಂಡಿರುವ ಹೆಣ್ಣು! ಕರೆ ಮಾಡುವಾಗ ಮಾತ್ರ ಅಲ್ಲ, ಮೆಸೇಜ್ ಕಳಿಸುವಾಗಲೇ ಏನೆಂದು ಮಾತನಾಡಲಿ? ಯಾವ ಶಬ್ದ ಬಳಸಲಿ? ಏನೆಂದು ಪ್ರತಿಕ್ರಿಯಿಸಲಿ? ಎಂಬ ನೂರೆಂಟು ಗೊಂದಲದ ಗೂಡಾಗಿದ್ದುಕೊಂಡೇ ಅವಳಿಗೆ ಪ್ರತಿಕ್ರಿಯಿಸುತ್ತಿದ್ದೆ. ಎಲ್ಲಿ ನನ್ನ ದಡ್ಡತನ, ಹಿಂಜರಿಕೆ, ಭಯಗಳು ಅವಳಿಗೆ ಗೊತ್ತಾಗಿಬಿಡುತ್ತಾವೋ, ಅವಳೆಲ್ಲಿ ನನ್ನನ್ನು ತಿರಸ್ಕರಿಸಿಬಿಡುವಳೋ ಎಂಬ ಆತಂಕದಲ್ಲೇ ಮಾತನಾಡುತ್ತಿದ್ದೆ. ಪರಿಸ್ಥಿತಿ ಹೀಗಿರುವಾಗ ಅವಳೀಗ ನೇರ ಭೇಟಿಯಾಗೋಣ ಎನ್ನುತ್ತಿದ್ದಾಳೆ! ಏನು ಮಾಡುವುದು? ಇಲ್ಲ ಎನ್ನುವುದಾದರೂ ಹೇಗೆ? ಅದೆಷ್ಟು ಕಾಲದಿಂದ ಕಾದಿರುವ ಘಳಿಗೆಯಿದು...

"ಡೋಮಿನೋಸ್, ಬನಶಂಕರಿ."

ಅವಳು ಆಯ್ಕೆ ಮಾಡಿದ ಜಾಗಕ್ಕೆ ಸರಿ ಎಂದು ಪಟಪಟನೆ ತಯಾರಾಗತೊಡಗಿದೆ. ನೂರಿಪ್ಪತ್ತು ವರ್ಷ ವಯಸ್ಸಿನ ಅಜ್ಜಿಯ ಮೈಯ ಮಡಿಕೆಗಳಂತೆ ನುಜ್ಜುಗುಜ್ಜಾಗಿದ್ದ ಅಂಗಿಗೆ ಐರನ್ ಬಾಕ್ಸ್ ತಾಗಿಸುವಾಗ ಥಟ್ಟನೆ ನೆನಪಾಯಿತು... ಈ ಹಿಂದೆ ಅವಳನ್ನು ಭೇಟಿಯಾಗಲೂ ಹೀಗೇ ಸಂಭ್ರಮದಲ್ಲಿ ತಯಾರಾಗಿದ್ದೆ ಅಲ್ವಾ?

ಸುಮಾ! ಜಾಲತಾಣದಲ್ಲಿ ಭೇಟಿಯಾದ ಹುಡುಗಿ. ನನ್ನ ಉದ್ಯೋಗ, ಇರುವ ಕಂಪನಿ, ಶೇರ್ ಮಾಡುವ ಪೋಸ್ಟ್‌ಗಳನ್ನು ನೋಡಿ ನಾನು ಅತ್ಯಂತ ಪ್ರಬುದ್ಧನೆಂದುಕೊಂಡು ನನ್ನನ್ನು ಪ್ರೀತಿಸಿದ್ದಳು, ಪರಿಚಯವಾದ ಒಂದೇ ವಾರಕ್ಕೆ! 'ನೀವಂದುಕೊಂಡಷ್ಟು ಪ್ರಬುದ್ಧ ನಾನಲ್ಲ. ಒಮ್ಮೆ ಹಚ್ಚಿಕೊಂಡರೆ ಮತ್ತೆ ಮರೆಯಲಾರದ ಅತೀಭಾವುಕ ನಾನು' ಎಂಬ ನನ್ನ ಎಚ್ಚರಿಕೆಯನ್ನೂ ಮೀರಿ ನನಗೆ ಹತ್ತಿರಾಗಿದ್ದಳು. ಭೇಟಿಯಾಗೋಣ ಎಂಬ ಅವಳ ಕೋರಿಕೆಗೆ ಉದ್ದೇಶಪೂರ್ವಕವಾಗಿಯೇ ಬೇಡವೆಂದ ನನಗೆ, ಬಸ್ ಚಾರ್ಜ್ ನಾನು ಕೊಡುತ್ತೇನೆ ಬನ್ನಿ ಎಂದು ಲೇವಡಿ ಮಾಡಿ ಕರೆಸಿಕೊಂಡಿದ್ದಳು. ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ನನ್ನನ್ನರಸಿ ಬಂದಿರುವ ಪ್ರೀತಿಯನ್ನು